ಶ್ರೀ ಎಸ್. ಕರಿಯಪ್ಪ.—ಟೆಂಡರ್ ಕರೆದು ಕಂಟ್ರಾಕ್ಟರ್ ಒಬ್ಬರಿಗೆ ಕೊಟ್ಟು ಆದಮೇಲೆ ಡಿ.ಸಿ.ಸಿ. ಕಾರ್ಯದರ್ಶಿಯವರು ಬಂದು ಇಂಟರ್‌ಫಿಯರ್ ಮಾಡಿದ ಮೇಲೆ ಅದನ್ನು ಹಾಗೆಯೆ ನಿಲ್ಲಿಸಿ ಬೇರೆಯವರಿಗೆ ಕೊಡಲು ಪ್ರಯತ್ನ ಮಾಡಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಅಂಥ ಸಂದರ್ಭಗಳು ಇದರಲ್ಲಿ ಕಾಣುವುದಿಲ್ಲ.

Sri K. LAKKAPPA.—How opinion can be changed from one Engineer to another ?

ಶ್ರೀ ಆಲೂರು ಹನುಮಂತಪ್ಪ.—ಪರ್ಸೆಂಟೇಜ್ ಆಫ್ ರಿಟರ್ನ್ ಒಂದು ಪರ್ಸೆಂಟ್ ಆಗುತ್ತದೆ. ಅಷ್ಟಕ್ಕೂ ಸಹಿತ ವಾಟರ್ ಗೇಜಿಂಗ್, ಸ್ಯೆಜ್ ಸ್ಕೋರ್ನ್ ಕರೆಕ್ಷನ್ ಮುಂತಾದವೂ ಆಗಬೇಕಾಗಿದೆ. ಅದಕ್ಕೋಸ್ಕರ ಕೆಲಸ ನಿಂತಿದೆ.

Investment on State Transport Buses

*Q.—231. Sri B. CHANNABYRE GOWDA (Haskote).—

Will the Government be pleased to state :—

(*a*) the initial amount of capital invested by Government on the State Transport Buses together with the total number of buses;

(*b*) the amount of capital that is being invested every year by Government on those buses;

(*c*) the number of buses that are plying at present.

A.—Sri D. DEVARAJ URS (Minister for Transport and Tourism).—

(*a*) Rs. 7,13,77,037 as on 1-8-1961 the date of formation of Corporation.

Total number of buses ... 1,652.

(*b*) The amount invested from 1-8-1961 and onwards is as follows :

Year	*Capital invested on buses*
	Rs.
1961-62	1,75,01,698
1962-63	87,28,128
1963-64	36,76,341
1964-65	1,07,93,656

(*c*) 1,824.

†ಶ್ರೀ ಡಿ. ದೇವರಾಜ ಅರಸ್.—'ಸಿ' ಉತ್ತರದಲ್ಲಿ 1824 ಎಂದು ಇದೆ ಅದನ್ನು 1830 ಎಂದು ತಿದ್ದಿಕೊಳ್ಳಬೇಕು.

ಶ್ರೀ ಎಸ್. ಕರಿಯಪ್ಪ.—ಬಸ್ ಕಾರ್ಪೊರೇಷನ್ ಮಾಡುವುದರಿಂದ ಸುಮಾರು 12 ಕೋಟಿ ರೂಪಾಯಿ ಇನ್‌ವೆಸ್ಟ್ ಮಾಡಿದ್ದೀರಿ ? ಇದಕ್ಕೆ ಎಷ್ಟು ಪರ್ಸೆಂಟ್ ಪ್ರಾಫಿಟ್ ಬಂದಿದೆ ?

ಶ್ರೀ ಡಿ. ದೇವರಾಜ ಅರಸ್.—ರಫ್ ಆಗಿ ಹೇಳಬಹುದು. ಪ್ರತಿವರ್ಷ ಇಷ್ಟೇ ಎಂದು ಕರಾರುವಾಕ್ಕಾಗಿ ಹೇಳುವುದಕ್ಕಾಗುವುದಿಲ್ಲ. ಹಣಕ್ಕೆ 6 ಪರ್ಸೆಂಟು ಬಡ್ಡಿ ಕೊಡುತ್ತಾ ಇದ್ದೇವೆ. ಬಡ್ಡಿ ತೆಗೆದು ಖರ್ಚು ಕಳೆದು ಪ್ರತಿವರ್ಷ 50-55 ಲಕ್ಷ ರೂಪಾಯಿ ನಿವ್ವಳ ನಫೆ ಬರುತ್ತದೆ.

ಶ್ರೀ ಜಿ. ಎ. ಗೌಡ.—ತಾವು ವೆಹಿಕರ್ಸ್ ಮೇಲೆ ಡಿಪ್ರಿಸಿಯೇಷನ್ ಕಳೆದಿದ್ದೀರಾ? ಅದನ್ನು ಕಳೆದು ಎಷ್ಟು ಪರ್ಸೆಂಟೇಜ್ ಪ್ರಾಫಿಟ್ ಬರಬಹುದು.

ಶ್ರೀ ಡಿ. ದೇವರಾಜ ಅರಸ್.—ಎನೇನು ಕಳೆಯಬೇಕೋ ಅದನ್ನೆಲ್ಲಾ ಕಳೆದೇ ನಿವ್ವಳ ರಾಭ ಎಂದು ಹೇಳಿದೆ. ಸರ್ಕಾರಕ್ಕೆ ಕೊಡುವ ಬಡ್ಡಿ ಕಳೆದು ಬೇರೆ ಖರ್ಚು ಕಳೆದು ಡಿಪ್ರಿಸಿಯೇಷನ್ ಚಾರ್ಜು, ಸಂಬಳಸಾರಿಗೆ ಮತ್ತು ಮೆಂಟೆನನ್ಸ್ ಚಾರ್ಜು ತೆಗೆದು ನಿವ್ವಳ ನಷ್ಟೆ 4.6 ಪರ್ಸೆಂಟ್ ಬರುತ್ತದೆ. It varies between 4 and 5 per cent after deducting all these things.

ಶ್ರೀಮತಿ ನುಸೀಲಾಬಾಯಿ ಹೀರಾಚಂದ್ ಷಾ.—ಬೆಳಗಾಮು ಡಿವಿಷನ್, ಗುಲ್ಬರ್ಗಾ ಡಿವಿಷನ್ ಮತ್ತು ಬೇರೆ ಪ್ರತಿ ಡಿವಿಷನ್‌ನಲ್ಲೂ ಎಷ್ಟೆಷ್ಟು ನಷ್ಟೆ ಬರುತ್ತದೆಂದು ಹೇಳುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಬೇರೆ ಪ್ರಶ್ನೆ ಹಾಕಿದರೆ ಹೇಳುತ್ತೇನೆ.

ಶ್ರೀ ಎಸ್. ಎ. ರಾಮೇಗೌಡ.—ವೆಹಿಕರ್ಸ್‌ಗೆ ಎಷ್ಟು ಪರ್ಸೆಂಟೇಜ್ ಡಿಪ್ರಿಸಿಯೇಷನ್ ತೆಗೆದಿದ್ದೀರಿ?

ಶ್ರೀ ಡಿ. ದೇವರಾಜ ಅರಸ್.—ಆ ವಿವರಗಳು ನನ್ನಲ್ಲಿಲ್ಲ.

Mr. SPEAKER.—The Hon,ble Minister may furnish that information to the Hon'ble Member later.

ಶ್ರೀ ಬಿ. ಚನ್ನಬ್ಯೆರೇಗೌಡ.—ಪ್ರೈವೇಟ್ ಬಸ್ ಓನರ್ಸ್ ಇನ್‌ಕಂಟ್ಯಾಕ್ಟ್ಸ್ ಕೊಡುವ ರೀತಿಯಲ್ಲಿ ನೀವು ಕೊಟ್ಟ ಪಕ್ಷದಲ್ಲಿ ಈ ಉದ್ಯಮದಿಂದ ನಷ್ಟವಾಗುತ್ತದೆಂದು ಹೇಳಿದರೆ ಏನು ಹೇಳುತ್ತೀರಿ?

Mr. SPEAKER.—That is a hypothetical question. The facilities they give, the services they render, the organisation they set up are all different things. If the Member is against nationalisation, he may put it straightaway.

Sri D. DEVARAJ URS.—If I may be permitted to say, the rate of depreciation is one-ninth of the total cost of a bus per year.

The average life of a vehicle varies according to so many circumstances. Sometimes it may last for five years or eight years. In some cases they do not re-condition the vehicles. So far as our Corporation is concerned we have a policy of reconditioning the vehicle not once but twice. The maximum mileage we have fixed is 3 lakhs miles. So, t depends upon so many factors. We cannot go on manipulating as we like. Even the income-tax has got certain formula upon which we have to work these things.

ಶ್ರೀ ಎಸ್. ಗೋಪಾಲ ಗೌಡ.—ರಾಜ್ಯದಲ್ಲಿ ಇದುವರೆಗೂ ರಾಷ್ಟ್ರೀಕರಣವಾಗದೇ ಇರತಕ್ಕ ಜಿಲ್ಲೆಗಳನ್ನು ಯಾವಾಗ ರಾಷ್ಟ್ರೀಕರಣ ಮಾಡುತ್ತೀರಿ? ಮತ್ತು ಆ ಬಗ್ಗೆ ಆಯೋಗದವರು ಸರ್ಕಾರದಿಂದ ಏನಾದರೂ ಸಾಲಗಳನ್ನು, ಹಣವನ್ನು ಕೇಳಿದ್ದಾರೆಯೇ ಹೇಗೆ?

ಶ್ರೀ ಡಿ. ದೇವರಾಜ ಅರಸ್.—ಈ ರಾಷ್ಟ್ರೀಕರಣದ ಬಗ್ಗೆ ಈಗಾಗಲೇ ನಥೆಯ ಮುಂದೆ ಅನೇಕಾವರ್ತಿ ತಿಳಿಸಿದ್ದೇನೆ. ಈಗ ನಾಲ್ಕು ಸ್ಕೀಂಗಳನ್ನು ಹಾಕಿದ್ದೇವೆ, ಅದರಲ್ಲಿ ಕನಕಪುರ ಪಾಕೆಟ್ ಸ್ಕೀಂ ಅಂತ ಏನಿದೆ ಅದು ಈಗಾಗಲೇ ಸರ್ಕಾರದಿಂದ ಒಪ್ಪಿಗೆ ಪಡೆದು ಬಂದಿದೆ. ಅದನ್ನು ಜಾರಿಗೆ ತರಬೇಕಾದ್ದು ಇದೆ. ಇನ್ನು ಮೂರು ಬೇರೆ ಬೇರೆ ಸ್ಕೀಂಗಳು ಇವೆ, ಅವನ್ನು ಚೀಫ್ ಮಿನಿಸ್ಟರು ಹಿಯರ್ ಮಾಡಬೇಕಾದ್ದು ಇದೆ. ಅವು ಅವರ ಮುಂದೆ ಇವೆ. ಹಿಯರಿಂಗ್ ಮಾಡಿ ಚಾಪ್ಟರ್ 4 (*a*) ನೋಟಿಫಿಕೇಷನ್ ಏನು ಅವರ ಮುಂದೆ ಬಂದಿದೆ ಅದಕ್ಕೆ ಸರ್ಕಾರದ ಅಪ್ರೂವರ್ ಆದಮೇಲೆ ಒಂದೊಂದನ್ನಾಗಿ ತೆಗೆದುಕೊಳ್ಳಬೇಕಾದ್ದು ಇದೆ. 4ನೇ-ಪಂಚವಾರ್ಷಿಕ ಯೋಜನೆಯ ಅಖ್ಯರಿನಲ್ಲಿ ನಾವು ಸಂಸ್ಥಾನಾವಳಿ ಸಂಪೂರ್ಣ ರಾಷ್ಟ್ರೀಕರಣ ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಎಮರ್ಜೆನ್ಸಿ ಬಂದು ಅನೇಕ ತೊಂದರೆಗಳು ಉಂಟಾಗಿರುವುದರಿಂದ ಸಕಾಲಕ್ಕೆ ನವಂಗೆ ಬೇಕಾಗಿರುವ ಚಾಸಿ ಸಿಕ್ಕದೇ ಇರುವುದೂ ಕೂಡ ಅಡಚಣೆಯಾಗಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ಕಾರ್ಪೊರೇಷನ್ ಅವರು ತೆಗೆದುಕೊಂಡಿರತಕ್ಕ ರೂಟ್‌ಗಳಲ್ಲಿ ಪ್ರೈವೇಟ್ ಬಸ್‌ಗಳವರೂ ಓಡಿಸುತ್ತಾ ಇದ್ದಾರೆ ಆದ್ದರಿಂದ ಕಾರ್ಪೊರೇಷನ್ ಅವರಿಗೆ ಬರತಕ್ಕ ಉತ್ಪನ್ನ ಕಡಮೆಯಾಗುತ್ತಾ ಇದೆ ಎಂಬುದು ನಿಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ದೇವರಾಜ ಅರಸ್.—ಹೌದು, ರಾಷ್ಟ್ರೀಕರಣವಾಗಿರುವ ಕಡೆ ಪ್ರೈವೇಟ್ ಆಪರೇಟರ್ಸ್ ಬಸ್ ಓಡಿಸಲು ಕಾನೂನು ರೀತ್ಯ ಸಾಧ್ಯವಿಲ್ಲ. ರಾಷ್ಟ್ರೀಕರಣವಾಗದೇ ಇರತಕ್ಕ ರೂಟ್‌ಗಳಲ್ಲಿ ಪ್ರೈವೇಟ್ ಆಪರೇಟರ್ಸ್ ಮತ್ತು ನಮ್ಮದು ಎರಡೂ ಒಟ್ಟಿಗೆ ಓಡಾಡುವ ಕಡೆ ಸ್ವಲ್ಪ ನಷ್ಟವಾಗುತ್ತಾ ಇದೆ. ಕ್ಲಾಂಡೆಸ್ಟೈನ್ ಆಪರೇಷನ್ ಕೆಲವು ಕಡೆ ಇದೆ. ಆರ್. ಟಿ. ಎ. ಗೆ ಬಳಪಟ್ಟದ್ದು ಅದು ಕ್ಯಾಸಿ ಜ್ಯುಡಿಷಿಯರ್ ಬಾಡಿ ಇದ್ದರಿಂದ ಅವರೂ ಕೂಡ ನ್ಯಾಷನಲೈಸ್ ಆದ ರೂಟ್ಸಿನಲ್ಲಿ ಪ್ರೈವೇಟ್ ಆಪರೇಟರ್ಸ್‌ಗೆ ಕೆಲವು ಕಡೆ ಪರ್ಮಿಟ್ಸ್‌ನ್ನು ಕೊಟ್ಟಿದ್ದಾರೆ; ಆದ್ದರಿಂದ ಇದಕ್ಕೆ ಸ್ವಲ್ಪ ಧಕ್ಕೆ ಬರುತ್ತಾ ಇದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ಬಸ್ಸುಗಳ ಓಡಾಟದಲ್ಲಿ ಒಂದೆರಡು ಡಿವಿಜನ್‌ಗಳಲ್ಲಿ ಮಾತ್ರ ಲಾಭದಾಯಕವಾಗಿದ್ದು ಉಳಿದ ಡಿವಿಜನ್‌ಗಳಲ್ಲಿ ನಷ್ಟವಾಗುತ್ತಾ ಇರುವುದರಿಂದ ಇದನ್ನು ಎಂ. ಎಸ್. ಆರ್. ಟಿ. ಸಿ. ಅವರಿಂದ ತೆಗೆದು ಖಾಸಗಿಯವರಿಗೆ ವಹಿಸಲು ಪ್ರಯತ್ನ ಮಾಡುತ್ತೀರಾ?

Sri D. DEVARAJ URS.—Everything is hypothitical. It is not correct that in any of the divisions we are losing excepting B. T. S. In every Division we are earning. Secondly the question of handing over to private operators does not arise.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—4ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಮಾಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದೀರಿ ಎಂದು ಅಶ್ವಿಣ್ ಕೊಡಿಸಿದಿರಿ. 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಆಳವಡಿಸಿರುವ ರಾಷ್ಟ್ರೀಕರಣ ಮಾಡತಕ್ಕ ವಿಷಯದಲ್ಲಿ ಎಷ್ಟು ಹಣವನ್ನು ಆಳವಡಿಸಿದ್ದೀರಿ?

Mr. SPEAKER.—How does it arise?

Sri C. J. MUCKANNAPPA.—May I know the number of routes that would be nationalised by the end of the Third Plan?

Sri D. DEVARAJ URS.—I want notice.

Sri G. V. GOWDA.—May I know when the M. S. R. T. C. will be able to repay the capital taken from the Government?

Mr. SPEAKER.—How does it arise? Profit motive is not here.

ಶ್ರೀ ಎಸ್. ಗೋಪಾಲ ಗೌಡ.—ಸರ್ಕಾರದವರು ರಾಷ್ಟ್ರೀಕರಣ ಮಾಡಿರತಕ್ಕ ರಸ್ತೆಗಳಲ್ಲಿ ಆರ್. ಟಿ. ಎ. ನವರು ಪರ್ಮಿಟ್ ಕೊಟ್ಟುಬಿಡುತ್ತಾರೆ. ಆದ್ದರಿಂದ ಖಾಸಗಿಯವರು ಅಲ್ಲಿ ಬಸ್ಸುಗಳನ್ನು ನಡೆಸುತ್ತಾರೆ ಮಂಗಳೂರಿನಿಂದ ಮುಂಬೈಗೆ ಒಂದು ಬಸ್ಸು ನಡೆಯುತ್ತಾ ಇದೆ, ಅದರಿಂದಾಗಿ ಸ್ವಲ್ಪ ಧಕ್ಕೆ ಬರುತ್ತದೆ ಎಂದು ಮಾನ್ಯ ಸಚಿವರು ಹೇಳಿದರು. ಸಾರಿಗೆಯನ್ನು ಪೂರ್ತಿಯಾಗಿ ಸರ್ಕಾರದವರೇ ನಡೆಬೇಕೆಂಬ ತತ್ವಕ್ಕೆ ಸರ್ಕಾರದವರು ಕಟ್ಟುಬಿದ್ದಿರುವುದರಿಂದ ಸರ್ಕಾರದವರು ನಿಜವಾಗಿಯೂ ಈ ಬಸ್ಸುಗಳ ಚಾಸಿಗಳನ್ನು ಪಡೆಯುವುದಕ್ಕೆ ಸಾಧ್ಯವಾಗದೇ ತನ್ನ ಅರ್ಧಾಂಗಿರತಕ್ಕ ರಾಷ್ಟ್ರೀಕರಣ ಕೆಲಸವನ್ನು ಮುಂದುವರಿಸುತ್ತಾ ಇಲ್ಲವೋ? ಅಥವಾ ಖಾಸಗೀ ಆಪರೇಟರ್ಸ್‌ಗಳ ಒತ್ತಾಯಕ್ಕೆ ಬಲಿಯಾಗಿ ಈ ಕೆಲಸವನ್ನು ಮಾಡುತ್ತಾ ಇಲ್ಲವೋ ಎಂಬುದು ಅನುಮಾನಕ್ಕೆ ಬಂದಿದೆ, ಅದನ್ನು ಸ್ವಲ್ಪ ವಿವರಿಸಬೇಕು.

ಶ್ರೀ ಡಿ. ದೇವರಾಜ ಅರಸ್.—ಶ್ರೀಮಾನ್ ಗೋಪಾಲ ಗೌಡರು ಅನುಮಾನಪಡದೆ ಹೇಳಿದ್ದನ್ನು ನೇರವಾಗಿ ಒಪ್ಪಿಕೊಂಡರೆ ಅನುಮಾನಕ್ಕೆ ಏನೂ ಕಾರಣ ಇಲ್ಲ. ಅವರು ಹೇಳಿದ್ದನ್ನು ಕೇಳುವ ಇಚ್ಛೆ ಇದ್ದರೆ ಒಪ್ಪುತ್ತಾರೆ. ಅನುಮಾನ ಪಟ್ಟರೆ ಅದಕ್ಕೆ ನಾನು ಜವಾಬ್ದಾರನಲ್ಲ. ಸಾಕಾದಷ್ಟು ದುಡ್ಡನ್ನು ಒದಗಿಸುವುದಕ್ಕೆ ನಮಗೆ ಕಷ್ಟ ಇದೆ. ಸುಮಾರು 8-10 ಕೋಟಿ ರೂಪಾಯಿ ಎಕ್ಸ್‌ಟ್ರಾ ಬೇಕಾಗುತ್ತದೆ. ನಾವು ಮತ್ತು ಇಂಡಿಯಾ ಸರ್ಕಾರದವರು ಸೇರಿ ಈ ದುಡ್ಡನ್ನು ಒದಗಿಸಬೇಕು. ದುಡ್ಡು ಒದಗಿಸಿದರೂ ಸಹ ಈ ವರ್ಷವೇ ಸುಮಾರು 400 ಚಾಸಿಗಳನ್ನು ತೆಗೆದುಕೊಳ್ಳಬೇಕೆಂದು ಆರ್ಡರ್ ಕೊಟ್ಟಿದ್ದರಲ್ಲಿ ಇಂಡಿಯಾ ಸರ್ಕಾರದವರು ಕೆಲವು ಚಾಸಿಗಳನ್ನು ಅವರು ತಮ್ಮ ಡಿಫೆನ್ಸ್ ಕೆಲಸಕ್ಕೆ ತೆಗೆದುಕೊಂಡುಬಿಟ್ಟಿದ್ದಾರೆ. ಚಾಸಿಗಳು ನಮಗೆ ಸಿಕ್ಕುತ್ತ ಇಲ್ಲ. ಅದು ಬಹಳ ಪ್ರಬಲವಾದ ಕಾರಣ ರಾಷ್ಟ್ರೀಕರಣವನ್ನು ಮುಂದುವರಿಸದೇ ಇರುವುದಕ್ಕೆ ಆಗಿದೆ.